# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ ರಾಣೆಬೆನ್ನೂರು

**ಸಿ.ಸಿ.80/2023**

ಪಿರ್ಯಾಧಿ : ಅಬಕಾರಿ ಉಪ ನಿರೀಕ್ಷಕರು,
ರಾಣೆಬೆನ್ನೂರು ವಲಯ.

**ವಿರುದ್ಧ**

ಆರೋಪಿತರು: ಹನುಮಂತಪ್ಪ ತಂದೆ ಬಸವರಾಜ ನಡುವಿನಮನಿ,
ವಯಸ್ಸುಃ 27 ವರ್ಷ, ವಾಸಃ ಚಳಗೇರಿ,
ತಾಃ ರಾಣೆಬೆನ್ನೂರು, ಜಿಃ ಹಾವೇರಿ.

**ಕಲಂ 313 ಅಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಶ್ನೆ 1 :-** ಸಾಕ್ಷಿದಾರರು ತಮ್ಮ ವಿಚಾರಣೆಯಲ್ಲಿ ಹೇಳಿರುವುದನ್ನು ಕೇಳಿಸಿಕೊಂಡಿದ್ದೀರಾ ?

ಉತ್ತರ :-

**ಪ್ರಶ್ನೆ 2 :- ಫ್ರಾಸಾ-1 ಲತೇಶ್ ಆರ್.ಎಸ್. ಹಾಗೂ ಫ್ರಾಸಾ-2 ಮಲ್ಲಿಕಾರ್ಜುನಯ್ಯ ಹಾಲಸ್ವಾಮಿಮಠ ಇವರು ತಮ್ಮ ಸಾಕ್ಷ್ಯದಲ್ಲಿಃ-** ದಿನಾಂಕ 29.03.2023 ಸಂಜೆ 07-00 ಘಂಟೆಗೆ ಅವರು ಚಳಗೇರಿ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಅಕ್ರಮ ಮದ್ಯ ಸಾಗಾಟದ ಬಗ್ಗೆ ಬಂದ ಖಚಿತ ಮಾಹಿತಿಯ ಮೇರೆಗೆ ಪಂಚರೊಂದಿಗೆ ಕರೂರಿನಿಂದ ಚಳಗೇರಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಬರುವ ರೈಲ್ವೇ ಸೇತುವೆ ಮುಂದೆ ಆರೋಪಿತರಾದ ನೀವು ದ್ವಿಚಕ್ರ ವಾಹನ ಸಂಖ್ಯೆ ಕೆಎ-68/ಕೆ-3370 ರಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಮದ್ಯ ಸಾಗಾಟ ಮಾಡುತ್ತಿರುವಾಗ ಅವರು ದ್ವಿಚಕ್ರ ವಾಹನ

ನಿಲ್ಲಿಸುವಂತೆ ಸೂಚಿಸಿದಾಗ ಆರೋಪಿತರಾದ ನೀವು 30 ಮೀಟರ್ ದೂರದಿಂದ ವಾಹನ ಹಾಗೂ ಮದ್ಯ ತುಂಬಿದ ಚೀಲವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ, **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

ಉತ್ತರ :–

**ಪ್ರಶ್ನೆ 3 :–ಮುಂದುವರೆದು**, ಸ್ಥಳಕ್ಕೆ ಬಂದು ವಾಹನವನ್ನು ಪರಿಶೀಲಿಸಿದಾಗ 90 ಮಿಲಿಯ 70 ಹೈವರ್ಡ್ಸ್ ಚೀಯರ್ಸ್ ವಿಸ್ಕಿಯ ಟೆಟ್ರಾ ಪ್ಯಾಕ್‌ಗಳು, 90 ಮಿಲಿಯ 50 ಓಸಿ ವಿಸ್ಕಿಯ ಟೆಟ್ರಾ ಪ್ಯಾಕುಗಳು ಹಾಗೂ 36 ರಾಯಲ್ ಚಾಲೆಂಜ್ ಸ್ಟ್ರಾಂಗ್ ಪ್ರಿಮಿಯಂ ಬಿಯರ್ ಬಾಟಲ್‌ಗಳು ಇರುವುದು ಕಂಡುಬಂದಿರುತ್ತದೆ. ನಂತರ ಮದ್ಯ ಹಾಗೂ ವಾಹನವನ್ನು ಅಮಾನತುಪಡಿಸಿಕೊಂಡು, ಪಂಚನಾಮೆ ತಯಾರಿಸಿ, ಠಾಣೆಗೆ ಬಂದು ದೂರು ದಾಖಲಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ .

**ಉತ್ತರ** :–

**ಪ್ರಶ್ನೆ 4 :–ಪ್ರಾಸಾ–4 ಮಲ್ಲಪ್ಪ ಹಕ್ಕಿ ರವರು ತಮ್ಮ ಸಾಕ್ಷ್ಯದಲ್ಲಿಃ –** ದಿನಾಂಕ 30.03.2023 ರಂದು ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಸ್ವೀಕರಿಸಿ, ತನಿಖೆ ಮುಂದುವರೆಸಿ, ಘಟನಾಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ದ್ವಿಚಕ್ರ ವಾಹನದ ಬಗ್ಗೆ ಮಾಹಿತಿ ಕುರಿತು ಎಆರ್ ಟಿಓ, ರಾಣೆಬೆನ್ನೂರು ಇವರಿಗೆ ಪತ್ರ ಬರೆದು ವರದಿಯನ್ನು ಪಡೆದುಕೊಂಡು, ನಿಮಗೆ ನೋಟೀಸ್ ನೀಡಿ, ಹೇಳಿಕೆ ಪಡೆದುಕೊಂಡು ಮುದ್ದೆ ಮಾಲನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಿ, ವರದಿ ಪಡೆದುಕೊಂಡು, ನಿಮ್ಮ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

ಉತ್ತರ :-

**ಪ್ರಶ್ನೆ 5 :–** ನಿಮ್ಮ ಪರವಾಗಿ ಏನಾದರೂ ಹೇಳುವುದಿದೆಯಾ?

ಉತ್ತರ :–

**ಪ್ರಶ್ನೆ 6 :-** ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

ಉತ್ತರ :-

(**ಮೇಲಿನ ಕಲಂ 313 ಹೇಳಿಕೆಯನ್ನು ಆರೋಪಿತನಿಗೆ ಓದಿ ಹೇಳಿದಾಗ ಆರೋಪಿಯು ನೀಡಿದ ಉತ್ತರವನ್ನು ಯಥವತ್ತಾಗಿ ದಾಖಲಿಸಿಕೊಳ್ಳಲಾಯಿತು**)

Sd/-

ದಿನಾಂಕಃ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ರಾಣೆಬೆನ್ನೂರು

**ಆರೋಪಿತನ ಸಹಿಃ**